<u>2 ನೇ ಹೆಚ್ಚುವರಿ ಸಿವಿಲ್ ನ್ಯಾಯಾದೀಶರ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ, ಕುಂದಾಪುರ</u>

ಸಿ.ಸಿ ನಂಬ್ರ: **1517/2023** ಪಿಡಬ್ಲ್ಯೂ-**1**

ದಿನಾಂಕಃ 29-01-2025 ರಂದು ಸಾಕ್ಷಿಯನ್ನು ಪುನಹ ಕರೆಸಿ ವಿಧಿಬದ್ಧವಾಗಿ ಪ್ರಮಾಣವಚನ ಭೋಧಿಸಲಾಯಿತು.

<u>ಪಾಟಿ ಸವಾಲುಃ ಆರೋಪಿ ಪರ ವಕೀಲರಾದ ಶ್ರೀ . ಬಿ ಆರ್ ಎನ್ ರವರಿಂದ:</u>

ಈ ಪ್ರಕರಣ ದಾಖಲಿಸುವಾಗ ನಮ್ಮ ಸಂಸ್ಥೆಯ ಎಮ್ ಡಿ ಜಾರ್ಜ್ ಫರ್ನಾಂಡಿಸ್ ಆಗಿದ್ದರು. ನಾನು ಫಿರ್ಯಾದು ಸಂಸ್ಥೆಯಲ್ಲಿ ಶಾಖಾ ವ್ಯವಸ್ಥಾಪಕನಾಗಿದ್ದೇನೆ. ನಮ್ಮ ಸಂಸ್ಥೆಯಲ್ಲಿ ಲೇವಾದೇವಿ ವ್ಯವಹಾರ ಮಾಡಲಾಗುತ್ತದೆ. ಲೇವಾದೇವಿ ವ್ಯವಹಾರ ಮಾಡಲು ಪರವಾನಿಗೆ ಇರುತ್ತದೆ. ಈ ಪ್ರಕರಣದಲ್ಲಿ ನನಗೆ ಸಾಕ್ಷಿ ನುಡಿಯಲು ಅಧಿಕಾರ ನೀಡಲಾಗಿರುತ್ತದೆ. ಫಿರ್ಯಾದು ಸಂಸ್ಥೆಯ ಎಮ್ ಡಿ ನನಗೆ ಅಧಿಕಾರ ನೀಡಿರುತ್ತಾರೆ. ನನಗೆ ಈ ಪ್ರಕರಣದಲ್ಲಿ ಸಾಕ್ಷಿ ನುಡಿಯಲು ಯಾವುದೇ ಅರ್ಹತೆ ಇಲ್ಲ ಮತ್ತು ಅಧಿಕಾರ ಪತ್ರವೂ ಇಲ್ಲ ಎಂದರೆ ಸರಿಯಲ್ಲ.

ಆರೋಪಿ ದಿ. 20-06-2017 ರಂದು ಸಾಲ ಪಡೆದುಕೊಂಡಿರುತ್ತಾರೆ. ಆರೋಪಿಯು ಸದರಿ ಸಾಲಕ್ಕೆ ಭದ್ರತೆಗಾಗಿ ಎಲ್ ಐ ಸಿ ಬಾಂಡ ನೀಡಿದ್ದರು. ಸಾಲ ಪತ್ರದಲ್ಲಿ ಸರಂಡರ್ ವ್ಯಾಲ್ಯೂ ಎಂದು ಕಾಣಿಸಲಾಗಿರುತ್ತದೆ. ಸರಂಡರ್ ವ್ಯಾಲ್ಯೂ ಎಂದರೆ ಎಲ್ ಐ ಸಿ ನಲ್ಲಿ ಕಟ್ಟಿದ ಹಣಕ್ಕೆ ನೀಡುವ ಮೊತ್ತ. ಎಲ್ ಐ ಸಿ ಬಾಂಡ ಜೊತೆಗೆ ಎಲ್ ಐ ಸಿ ಯಿಂದ ನೀಡಿರುವ ಸರಂಡರ್ ವ್ಯಾಲ್ಯೂ ಸರ್ಟಿಫಿಕೇಟ್ ಆಧಾರದ ಮೇಲೆ ಆರೋಪಿಗೆ ಸಾಲ ನೀಡಿರುತ್ತೇವೆ. ಆ ಎಲ್ ಐ ಸಿ ಬಾಂಡನ ಮೂಲ ದಾಖಲೆಗಳನ್ನು ಇಟ್ಟುಕೊಂಡು ಸಾಲ ನೀಡಿರುತ್ತೇವೆ. ಆರೋಪಿ ಒಟ್ಟು 4 ಬಾಂಡಗಳನ್ನು ಕೊಟ್ಟಿದ್ದರು. ಆ ಬಾಂಡಗಳ ಮೆಚ್ಯುರಿಟಿ ಮೊತ್ತ ಎಷ್ಟು ಇತ್ತು ಎಂದು ನೆನಪಿಲ್ಲ. ಆರೋಪಿ ತಮ್ಮ ಸುರಕ್ಷೆಗೋಸ್ಕರ ಎಲ್ ಐ ಸಿ ಬಾಂಡ ಹೊಂದಿರುತ್ತಾರೆ ಎಂದರೆ ಸರಿ. ಎಲ್ ಐ ಸಿ ಬಾಂಡನ್ನು ಅಕಾಲಿಕ ಮರಣ ಹೊಂದಿದರೆ ಕುಟುಂಬಕ್ಕೆ ಪರಿಹಾರ ನಿಗಲಿ ಎಂದು ಮಾಡಿಸುತ್ತಾರೆ ಎಂದರೆ ಸರಿ.

ಆರೋಪಿ ನೀಡಿರುವ ಬಾಂಡಗಳನ್ನು ನಮಗೆ ಬೇಕಾದಾಗ ನಗದೀಕರಿಸಿಕೊಳ್ಳಬಹುದು ಎಂದು ಕರಾರು ಮಾಡಿಕೊಳ್ಳಲಾಗಿದೆ. ನಾನು ಈ ಪ್ರಕರಣದಲ್ಲಿ ಸಾಲದ ಕರಾರು, ಸಾಲದ ಅರ್ಜಿ, ಡಿಪಿ ನೋಟ್, ವಚನ ಪತ್ರ ಹಾಜರುಪಡಿಸಿರುತ್ತೇನೆ. ನ್ಯಾಯಾಲಯದಲ್ಲಿ ನಾನು ಹಾಜರುಪಡಿಸಿರುವ ದಾಖಲೆಗಳು ದೃಢೀಕೃತ ದಾಖಲೆಗಳು ಎಂದರೆ ಸರಿ. ನಮ್ಮ ಬಳಿ ಮೂಲ ದಾಖಲೆಗಳು ಇದ್ದು, ಅವುಗಳನ್ನು ಹಾಜರುಪಡಿಸಲು ತೊಂದರೆ ಇಲ್ಲ. ಸಾಲ ಅರ್ಜಿಯಲ್ಲಿ ಭದ್ರತೆಗಾಗಿ ನೀಡಿರುವ ಬಾಂಡನ್ನು ಮೆಚ್ಯುರಿಟಿಗೂ ಮೊದಲು ನಗದೀಕರಿಸಿಕೊಳ್ಳಬಹುದು ಎಂದು ಬರೆದಿಲ್ಲ, ಸಾಕ್ಷಿ ಮುಂದುವರೆದು ನಗದೀಕರಿಸಿಕೊಳ್ಳಲು ಎಲ್ ಐ ಸಿ ಕಚೇರಿಯಿಂದ ಅಸೈನಮೆಂಟ್ ಫಾರ್ಮ

ನೀಡಿರುವುದಾಗಿ ನುಡಿದಿರುತ್ತಾರೆ. ಆ ಅಸೈನಮೆಂಟ್ ಫಾರ್ಮ ನಮಗೆ ಎಲ್ ಐ ಸಿ ಯಿಂದ ನೀಡಲಾಗಿದೆ ಎಂದರೆ ಸರಿ. ಆ ಅಸೈನಮೆಂಟ್ ಫಾರ್ಮನಲ್ಲಿ ಆರೋಪಿಯ ಸಹಿ ಇದೆ. ನಾನು ಹೇಳಿದ ಅಸೈನಮೆಂಟ್ ಪಾರ್ಮ ಅಸ್ತಿತ್ವದಲ್ಲಿಲ್ಲ, ಅದಕ್ಕೆ ಆರೋಪಿ ಸಹಿ ಮಾಡಿಲ್ಲ ಎಂದರೆ ಸರಿಯಲ್ಲ.

ಸಾಲದ ಅವಧಿ 48 ತಿಂಗಳು ಎಂದರೆ 4 ವರ್ಷಗಳು. ಈ ಪ್ರಕರಣವನ್ನು ದಾಖಲಿಸಿದ ದಿನಾಂಕ ನೆನಪಿಲ್ಲ. ಚೆಕ್ಕಿನ ದಿನಾಂಕ *03-05-2018*. ಜೂನ್-*2017* ರಲ್ಲಿ ಪಡೆದ ಸಾಲದ ಬಾಬ್ತು ಮೇ-*2018* ರಲ್ಲಿ ಪ್ರಕರಣ ದಾಖಲಿಸಿರುತ್ತೇವೆ. ಆ ಸಾಲದ ವಾಯಿದೆ ಇರುವುದು 4 ವರ್ಷ ಅದಕ್ಕೂ ಪೂರ್ವದಲ್ಲಿ ಈ ಪ್ರಕರಣ ದಾಖಲಿಸಿದ್ದೇವೆ ಎಂದರೆ ಸರಿ. ಒಂದು ವರ್ಷದಲ್ಲಿ ಕಂತುಗಳನ್ನು ಪಾವತಿಸದಿದ್ದಾಗ, ಆರೋಪಿಯ ಮನೆಗೆ ನಾನು ನಮ್ಮ ಸಿಬ್ಬಂದಿಯೊಂದಿಗೆ ಮೊದಲ ಬಾರಿಗೆ ಹೋಗಿರುತ್ತೇವೆ. 2 ನೇ ಬಾರಿ ಆರೋಪಿ ಮತ್ತು ಜಾಮೀನುದಾರರ ಇಬ್ಬರ ಮನೆಗೂ ಹೋಗಿರುತ್ತೇವೆ. ಆರೋಪಿಗೆ ರಾಜು ಎನ್ನುವವರು ಜಾಮೀನು ನೀಡಿರುತ್ತಾರೆ. ಆರೋಪಿಗೆ ಇಬ್ಬರು ಜಾಮೀನು ನೀಡಿರುತ್ತಾರೆ, ಸಾಕ್ಷಿ ಮುಂದುವರೆದು 3 ಜನ ಜಾಮೀನುದಾರರು ಎಂದು ನುಡಿದಿರುತ್ತಾರೆ. ಜಾಮೀನುದಾರರಲ್ಲಿ 1, 2 ಮತ್ತು 3 ಎಂದು ನಮೂದಿಸಿದ್ದು, ಬಾಧ್ಯತೆ ಒಂದೇ ಇರುತ್ತದೆ.

ಜಾಮೀನುದಾರರ ಮನೆಗೆ 2-3 ಬಾರಿ ಹೋಗಿರಬಹುದು. 1 ನೇ ಜಾಮೀನುದಾರರು ಆರೋಪಿಯ ಹೆಂಡತಿ. ನಾವು ನೋಟಿಸು ನೀಡಿದ ನಂತರ ವ್ಯಕ್ತಿಗತವಾಗಿ ಅವರ ಮನೆಗೆ ಹೋಗಿ ಬಾಕಿ ಹಣದ ಬಗ್ಗೆ ಕೇಳಿರುತ್ತೇವೆ. ನಮ್ಮ ಸಂಸ್ಥೆಗೆ ಸೌಹಾರ್ದ ಕೊ-ಆಪರೇಟಿವ್ ಸೊಸೈಟಿಯ ಬೈಲಾಗಳು ಅನ್ವಯಿಸುತ್ತವೆ. ನಾವು ಆ ಬೈಲಾವನ್ನು ಅನುಸರಿಸಿರುತ್ತೇವೆ. ನಮ್ಮ ಬೈಲಾ ಪ್ರಕಾರ 2 ತಿಂಗಳ ಕಂತು ಪಾವತಿ ಮಾಡದೇ ಇದ್ದರೆ ನೋಟಿಸು ನೀಡಿ, ನಂತರ ವೈಯಕ್ತಿಕವಾಗಿ ಅವರ ಮನೆಗೆ ಹೋಗಲು ಅರ್ಹತೆ ಇರುತ್ತದೆ. ನಾವು ಆ ರೀತಿ ಹೋದ ಬಗ್ಗೆ ದಾಖಲೆಯನ್ನು ನಿರ್ವಹಿಸುತ್ತೇವೆ. ಕೊನೆಯ ಬಾರಿ ಆರೋಪಿಯ ಮನೆಗೆ 2018 ರಲ್ಲಿ ಸಾಲ ಪಡೆದ ಒಂದು ವರ್ಷದ ಅವಧಿಯಲ್ಲಿ ಹೋಗಿರುತ್ತೇವೆ.

ಆರೋಪಿಯು ಚೆಕ್ಕನ್ನು ನಮ್ಮ ಸಂಸ್ಥೆಗೆ ತಂದು ಕೊಟ್ಟಿರುತ್ತಾರೆ. ನಾವು ವಸೂಲಾತಿಗಾಗಿ ವೈಯಕ್ತಿಕವಾಗಿ ಹೋದಾಗ ಬಾಕಿ ಹಣವನ್ನು ಕಟ್ಟಬೇಕೆಂದು ಹೇಳಿ ಬಂದಿರುತ್ತೇವೆ. ಆರೋಪಿಯ ಹೆಂಡತಿಯ ಬಳಿ 2-3 ಬಾರಿ ಹೋಗಿರುತ್ತೇವೆ. ಆ ಕುರಿತು ನಮ್ಮ ಬೈಲಾನಲ್ಲಿ ಕಾನೂನು ಇರುವ ಬಗ್ಗೆ ದಾಖಲೆ ಹಾಜರುಪಡಿಸಲು ತೊಂದರೆ ಇಲ್ಲ. ಚೆಕ್ಕು ಪ್ರಕರಣ ದಾಖಲಿಸಿದ ನಂತರ ವಸೂಲಾತಿಗಾಗಿ ಮನೆಗೆ ಹೋಗಲು ಹಕ್ಕು ಇದೆಯಾ ಎಂದರೆ ನನಗೆ ಗೊತ್ತಿಲ್ಲ. ವಿನೋದ ಮಡಿವಾಳ ಎನ್ನುವವರು ನಮ್ಮ ಮಾರಾಟ ಅಧಿಕಾರಿ. ದಿಃ 26-11-2022 ರಲ್ಲಿ ನನ್ನ ಮೇಲೆ ಮತ್ತು ವಿನೋದ ಮಡಿವಾಳರವರ ಮೇಲೆ ಪೋಲಿಸರಿಗೆ ದೂರು ನೀಡಲಾಗಿದೆ ಎಂದರೆ ಸರಿ. ಆ ದೂರಿಗೆ

ಸಂಬಂಧಿಸಿದಂತೆ ನಾನು ಪೊಲೀಸ ಠಾಣೆಗೆ ಹೋಗಿರುತ್ತೇನೆ ಎಂದರೆ ಸರಿ. ಪೊಲೀಸ ಠಾಣೆಯಲ್ಲಿ ಪಿ ಎಸ್ .ಐ ಸದಾಶಿವ ಗೌರೋಜಿರವರು ನಮ್ಮ ಮೇಲೆ ದೂರು ನೀಡಿರುವುದಾಗಿ ಹೇಳಿರುತ್ತಾರೆ.

ಈ ಪ್ರಕರಣದಲ್ಲಿ ಚೆಕ್ಕಿನ ಸಹಿಯಲ್ಲಿ ವ್ಯತ್ಯಾಸ ಇದೆ ಎಂಬ ಕಾರಣಕ್ಕೆ ಅಮಾನ್ಯಗೊಂಡಿರುತ್ತದೆ. ಆರೋಪಿಯು ತಮ್ಮ ಹೆಂಡತಿಯಿಂದ ಬಲಾತ್ಕಾರವಾಗಿ ಖಾಲಿ ಚೆಕ್ಕನ್ನು ಪಡೆದುಕೊಂಡು, ಜೀವ ಬೆದರಿಕೆ ಹಾಕಿದ್ದಾರೆ ಎಂದು ದೂರು ದಾಖಲಿಸಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ನಮ್ಮ ಸಂಸ್ಥೆಯಲ್ಲಿ 111 ಶಾಖೆಗಳು ಇವೆ. ಈ ಪ್ರಕರಣ ದಾಖಲಿಸುವ ಸಮಯದಲ್ಲಿ ಜಾರ್ಜ ಫರ್ನಾಂಡಿಸ್ ಎಮ್ ಡಿ ಆಗಿದ್ದರು. ಜಾರ್ಜ ಫರ್ನಾಂಡಿಸ್ ರವರು ಪ್ರಭಾವಿ ವ್ಯಕ್ತಿ ಎಂದರೆ ಸರಿ. ಜಾರ್ಜ ಫರ್ನಾಂಡಿಸ್ ರವರು ಪಿ ಎಸ್ ಐ ರವರ ಮೇಲೆ ತಮ್ಮ ಪ್ರಭಾವ ಬೀರಿ ನಮ್ಮ ಮೇಲೆ ದಾಖಲಿಸಿದ ಪ್ರಕರಣವನ್ನು ಮುಚ್ಚಿ ಹಾಕಿರುತ್ತಾರೆ ಎಂದರೆ ಸರಿ.

2019 ರಿಂದ 2022 ರವರೆಗೆ ಕೋವಿಡ್ ಪ್ರಯುಕ್ತ ಸಾಲ ವಸೂಲಾತಿಗೆ ನಿಬಂಧನೆ ಇತ್ತು ಎಂದರೆ ಸರಿ. ಆ ರೀತಿ ನಿಬಂಧನೆ ಇದ್ದರು ಕೂಡ ಬಲಾತ್ಕಾರವಾಗಿ ಅವರನ್ನು ಬೆದರಿಸಿ ಚೆಕ್ಕನ್ನು ಪಡೆದುಕೊಂಡಿರುತ್ತೇವೆ ಎಂದರೆ ಸರಿಯಲ್ಲ. ಕೋವಿಡ್ ನಿಬಂಧನೆ ಇದ್ದರು ಕೂಡ ಅದನ್ನು ನಾವು ಉಲ್ಲಂಘಿಸಿದ್ದೇವೆ ಎಂದರೆ ಸರಿಯಲ್ಲ. 2018 ರಲ್ಲಿ ಬಲಾತ್ಕಾರವಾಗಿ ಚೆಕ್ಕು ಪಡೆದುಕೊಂಡಿದ್ದಾರೆ ಎಂದು ದೂರು ನೀಡಿದ್ದರು, ಪೋಲಿಸರು ದೂರನ್ನು ತೆಗೆದುಕೊಂಡಿಲ್ಲ ಎಂದರೆ ಸರಿಯಲ್ಲ. 2018 ರಲ್ಲಿ ಪಡೆದ ಚೆಕ್ಕನ್ನು ಉಲ್ಲೇಖಿಸಿ 2022 ರಲ್ಲಿ ದೂರು ನೀಡಿದ್ದರು ಎಂದರೆ ಸರಿಯಲ್ಲ. ಆರೋಪಿ ವೈಯಕ್ತಿಕವಾಗಿ ಚೆಕ್ಕನ್ನು ಕೊಟ್ಟಿಲ್ಲ ಎಂದರೆ ಸರಿಯಲ್ಲ. ಚೆಕ್ಕನ್ನು ಕ್ಲೊಸಿಂಗ್ ಟೈಮನಲ್ಲಿ ಇದ್ದ ಮೊತ್ತಕ್ಕೆ ಹಾಕಿರುತ್ತೇವೆ. ಕ್ಲೊಸಿಂಗ್ ಮೊತ್ತ ಎಂದರೆ ಸಾಲದ ಮುಕ್ತಾಯ. ನಮಗೆ ಸಾಲದ ಕಂತುಗಳ ಬಾಕಿಗೆ ಮಾತ್ರ ಚೆಕ್ಕು ಪಡೆಯಲು ಅಧಿಕಾರ ಇದೆ, ಸಾಲದ ಕ್ಲೊಸಿಂಗ್ ಗೆ ಚೆಕ್ಕು ಪಡೆಯಲು ಅಧಿಕಾರ ಇಲ್ಲ ಎಂದರೆ ಸರಿಯಲ್ಲ. ಆ ಕಾರಣಕ್ಕೆ ನಾವು ನಮೂದಿಸಿದ ಹಣಕ್ಕೆ ಚೆಕ್ಕು ಪಡೆಯುವ ಅಧಿಕಾರ ಇಲ್ಲ ಮತ್ತು ಆರೋಪಿ ಚೆಕ್ಕನ್ನು ಕೊಟ್ಟಿಲ್ಲ ಎಂದರೆ ಸರಿಯಲ್ಲ.

ಆರೋಪಿಯಿಂದ ಪಡೆದುಕೊಂಡ ಎಲ್ ಐ ಸಿ ಬಾಂಡನ್ನು ಅವಧಿಗೂ ಮೊದಲು ನಗದೀಕರಿಸಲು ನಮಗೆ ಯಾವುದೇ ಅಧಿಕಾರ ಇಲ್ಲ ಎಂದರೆ ಸರಿಯಲ್ಲ. ಸರಂಡರ್ ವ್ಯಾಲ್ಯೂ ಎಷ್ಟು ಇತ್ತು ಎಂದು ನೆನಪಿಲ್ಲ. ಸರಂಡರ್ ವ್ಯಾಲ್ಯೂಗಿಂತ ಮೆಚ್ಯುರಿಟಿ ವ್ಯಾಲ್ಯೂ ಹೆಚ್ಚಾಗಿರುತ್ತದೆ ಎಂದರೆ ಸರಿ. ಎಲ್ ಐ ಸಿ ಸರಂಡರ್ ವ್ಯಾಲ್ಯೂವನ್ನು ಕಂತುಗಳನ್ನು ಕಟ್ಟಿದ ಆಧಾರದ ಮೇಲೆ ನೀಡಲಾಗುತ್ತದೆ. ಬಾಂಡನ ಮೆಚ್ಯುರಿಟಿ ಮೊತ್ತ ಎಷ್ಟು ಎಂದರೆ ನನಗೆ ನೆನಪಿಲ್ಲ. ನಾವು ನೀಡಿರುವ ಸಾಲ ಕಾನೂನಾತ್ಮಕವಾಗಿ ವಸೂಲು ಮಾಡಬಹುದಾದ ಸಾಲ ಅಲ್ಲ ಎಂದರೆ ಸರಿಯಲ್ಲ.

ಎಲ್ ಐ ಸಿ ಯಿಂದ ಬಂದ ಹಣವನ್ನು ಮೊದಲು ಬಡ್ಡಿಗೆ ಹಾಕಿ ನಂತರ ಅಸಲಿಗೆ ಹಾಕಿರುತ್ತೇವೆ. ಎಷ್ಟು ಹಣವನ್ನು ಅಸಲಿಗೆ ಮತ್ತು ಬಡ್ಡಿಗೆ ಹಾಕಿದ್ದೇವೆ ಎಂದು ದಾಖಲೆಯನ್ನು ಹಾಜರುಪಡಿಸಿರುತ್ತೇವೆ. ನಾನು ಯಾವುದೇ ಸೂಕ್ತ ದಾಖಲೆಯನ್ನು ಹಾಜರುಪಡಿಸದೇ ಅಸಿಂಧುವಾದ ದೂರನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ನನಗೆ ಫಿರ್ಯಾದು ಸಂಸ್ಥೆಯನ್ನು ಪ್ರತಿನಿಧಿಸಲು ಹಕ್ಕು ಇಲ್ಲ ಎಂದರೆ ಸರಿಯಲ್ಲ. ಚೆಕ್ಕಿನಲ್ಲಿರುವ ಸಹಿ ಆರೋಪಿಯದ್ದಲ್ಲ ಎಂದರೆ ಸರಿಯಲ್ಲ.

ಆರೋಪಿ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು, ಕಾಲಾವಕಾಶ ನೀಡಲಾಯಿತು.

ಓದಿ ಹೇ. ಕೇ. ಸರಿ ಇದೆ.

ನನ್ನ ಹೇ. ಮೇ. ಬೆ. ಮಾಡಲಾಗಿದೆ

2 ನೇ ಹೆಚ್ಚುವರಿ ಸಿವಿಲ್ ನ್ಯಾಯಾದೀಶರು
ಮತ್ತು ಜೆ.ಎಂ.ಎಫ್.ಸಿ. ಕುಂದಾಪುರ